# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **239** |
| 2 | ಸದಸ್ಯರ ಹೆಸರು | ಶ್ರೀ ಬಿ.ಜಿ.ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 14.09.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಕಂದಾಯ ಗ್ರಾಮಗಳಿವೆ; (ವಿವರ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕಂದಾಯ ಗ್ರಾಮಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸ</th><th>ಜಿಲ್ಲೆ</th><th>ತಾಲ್ಲೂಕು</th><th>ಒಟ್ಟು ಕಂದಾಯ ಗ್ರಾಮಗಳ ಸಂಖ್ಯೆ</th></tr>
<tr><td>1</td><td rowspan="7">ಕಲಬುರಗಿ</td><td>ಅಫಜಲಪುರ</td><td>90</td></tr>
<tr><td>2</td><td>ಆಳಂದ</td><td>114</td></tr>
<tr><td>3</td><td>ಚಿಂಚೋಳೀ</td><td>119</td></tr>
<tr><td>4</td><td>ಚಿತ್ತಾಪುರ</td><td>154</td></tr>
<tr><td>5</td><td>ಕಲಬುರಗಿ</td><td>168</td></tr>
<tr><td>6</td><td>ಜೇವರ್ಗಿ</td><td>158</td></tr>
<tr><td>7</td><td>ಸೇಡಂ</td><td>119</td></tr>
<tr><td colspan="3">ಒಟ್ಟು</td><td>922</td></tr>
<tr><td>1</td><td rowspan="6">ಯಾದಗಿರಿ</td><td>ಗುರುಮಿಟಕಲ್</td><td>58</td></tr>
<tr><td>2</td><td>ಹುಣಸಗಿ</td><td>73</td></tr>
<tr><td>3</td><td>ಶಹಪುರ</td><td>94</td></tr>
<tr><td>4</td><td>ಶೋರಪುರ</td><td>114</td></tr>
<tr><td>5</td><td>ವಡಗೇರ</td><td>65</td></tr>
<tr><td>6</td><td>ಯಾದಗಿರಿ</td><td>106</td></tr>
<tr><td colspan="3">ಒಟ್ಟು</td><td>510</td></tr>
</table></td></tr>
<tr><td>ಆ)</td><td>ಈ ಎಲ್ಲಾ ಗ್ರಾಮಗಳು ಸರ್ಕಾರದ ನೀತಿಯಂತೆ ಪೋಡಿಮುಕ್ತ ಗ್ರಾಮಗಳಾಗಿ ಘೋಷಣೆಯಾಗಿವೆಯೇ; ಇಲ್ಲದಿದ್ದಲ್ಲಿ, ಕಾರಣವೇನು; (ವಿವರ ನೀಡುವುದು)</td><td rowspan="2">ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಕಲಬುರಗಿ ಜಿಲ್ಲೆಯ ಒಟ್ಟು 922 ಗ್ರಾಮಗಳಲ್ಲಿ ಈವರೆಗೆ ಒಟ್ಟು 463 ಗ್ರಾಮಗಳನ್ನು (ಗುರುತಿಸಿ) ಅಳತೆಗೆ ಆಯ್ಕೆ ಮಾಡಿಕೊಂಡು, 460 ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರೈಸಿ, 56,592 ಬ್ಲಾಕ್(ಹಿಸ್ಸಾ)ಗಳಲ್ಲಿ 52,972 ಬ್ಲಾಕ್ (ಹಿಸ್ಸಾ)ಗಳ ದುರಸ್ತಿ ಮಾಡಿ, 52571 ಏಕಮಾಲಿಕತ್ವದ ಪಹಣಿಗಳನ್ನು ಸೃಜಿಸಲಾಗಿದೆ.<br>ಯಾದಗಿರಿ ಜಿಲ್ಲೆಯ ಒಟ್ಟು 510 ಗ್ರಾಮಗಳಲ್ಲಿ ಒಟ್ಟು 210 ಗ್ರಾಮಗಳನ್ನು (ಗುರುತಿಸಿ) ಅಳತೆಗೆ ಆಯ್ಕೆ ಮಾಡಿಕೊಂಡು, ಎಲ್ಲಾ ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರೈಸಿ, 33,133 ಬ್ಲಾಕ್(ಹಿಸ್ಸಾ)ಗಳಲ್ಲಿ 32,568 ಬ್ಲಾಕ್ (ಹಿಸ್ಸಾ)ಗಳ ದುರಸ್ತಿ ಮಾಡಿ 32568 ಏಕಮಾಲಿಕತ್ವದ ಪಹಣಿಗಳನ್ನು ಸೃಜಿಸಲಾಗಿದೆ.<br><br>ಸಾರ್ವಜನಿಕರು ದೈನಂದಿನ ಕೆಲಸಗಳಿಗಾಗಿ ಅಳತೆ ಕೋರಿ ಸಲ್ಲಿಸುವ 11ಇ, ಅನ್ಯ ಕ್ರಾಂತ, ತತ್ಕಾಲ್ ಪೋಡಿ, ಹದ್ದುಬಸ್ತು ಇತ್ಯಾದಿ ಅರ್ಜಿಗಳ ಹಾಗೂ ತಾಲ್ಲೂಕುಗಳಲ್ಲಿ ಬರುವ ಸ್ಥಳೀಯ ತೊಂದರೆಗಳ ಅಳತೆ ಕಾರ್ಯಗಳನ್ನು ನಿರ್ವಹಿಸಲು ಅವಶ್ಯಕವಾದ ಭೂಮಾಪಕರನ್ನು ಹೊರತುಪಡಿಸಿ ಉಳಿದ ಭೂಮಾಪಕರುಗಳನ್ನು ಬಳಸಿಕೊಂಡು ಪೋಡಿ ಮುಕ್ತ ಗ್ರಾಮ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.</td></tr>
<tr><td>ಇ)</td><td>ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು; ಯೋಜನೆಯ ವಿಳಂಬಕ್ಕೆ ಕಾರಣಗಳೇನು; ಹಾಗೂ ಕಾರಣ ಕರ್ತರು ಯಾರು? ವಿವರ ನೀಡುವುದು)</td></tr>
</table>

| | | |
|---|---|---|
| | | ರಾಜ್ಯದಲ್ಲಿ COVID-19 ಸಾಂಕ್ರಾಮಿಕ ರೋಗ ಹರಡುತ್ತಿದ್ದರಿಂದ. ಮತ್ತು ಲಾಕ್-ಡೌನ್ ಪ್ರಯುಕ್ತ ಸಾರ್ವಜನಿಕರಿಂದ ವಿವಿಧ ರೀತಿಯ ಅಳತೆ ಕೋರಿ ಸ್ವೀಕೃತವಾದ ಹೆಚ್ಚಿನ ಅರ್ಜಿಗಳು ಬಾಕಿ ಉಳಿದಿದ್ದು, ಈ ಅರ್ಜಿಗಳ ವಿಲೇವಾರಿಗಾಗಿ ಹೆಚ್ಚಿನ ಭೂಮಾಪಕರನ್ನು ನಿಯೋಜಿಸಿದ್ದರಿಂದ ಪೋಡಿಮುಕ್ತ ಗ್ರಾಮ ಯೋಜನೆಯ ಅನುಷ್ಠಾನದಲ್ಲಿ ತಾತ್ಕಾಲಿಕ ವಿಳಂಬವಾಗಿರುತ್ತದೆ. |

**ಸಂಖ್ಯೆ: ಕಂಇ 182 ಎಸ್‌ಎಸ್‌ಸಿ 2022**

(ಆರ್.ಅಶೋಕ)
ಕಂದಾಯ ಸಚಿವರು